ಕರ್ನಾಟಕ ಸರ್ಕಾರ
ಕಂದಾಯ ಇಲಾಖೆ

ಸಂಖ್ಯೆ:ಕಂಇ 3 ಎಡಿಎಂ 2008

ಕರ್ನಾಟಕ ಸರ್ಕಾರದ ಸಚಿವಾಲಯ
ಬಹು ಮಹಡಿ ಕಟ್ಟಡಿ
ಬೆಂಗಳೂರು, ದಿನಾಂಕ:4/06/2008

ಸುತ್ತೋಲೆ

**ವಿಷಯ:** ಸಾಮೂಹಿಕ ವಿವಾಹಗಳಲ್ಲಿ ಬಾಲ್ಯವಿವಾಹ ತಡೆಯುವ ಬಗ್ಗೆ.

****//****

ಬಾಲ್ಯ ವಿವಾಹವು ಒಂದು ಸಾಮಾಜಿಕ ಪಿಡುಗಾಗಿರುತ್ತದೆ. ಬಾಲ್ಯ ವಿವಾಹವು ಕಾನೂನು ರೀತ್ಯಾ ಶಿಕ್ಷಾರ್ಹ ಅಪರಾಧವಾಗಿರುತ್ತದೆ.

ಸರ್ಕಾರವು ಸರಳ ಸಾಮೂಹಿಕ ವಿವಾಹಗಳನ್ನು ಜನಪ್ರಿಯಗೊಳಿಸಲು "ಆದರ್ಶ ವಿವಾಹ" ಯೋಜನೆಯನ್ನು 2007-08ನೇ ಸಾಲಿನಿಂದ ಜಾರಿಗೊಳಿಸಿದ್ದು, ಇದರ ಉದ್ದೇಶವು ಆಡಂಬರದ ವಿವಾಹಗಳನ್ನು ತಡೆಗಟ್ಟುವುದು ಹಾಗೂ ವರದಕ್ಷಿಣೆ ನೀಡುವುದು ಮತ್ತು ಪಡೆಯುವುದನ್ನು ತಡೆಯುವುದು ಆಗಿರುತ್ತದೆ.

ಇಂತಹ ಸಾಮೂಹಿಕ ವಿವಾಹಗಳಲ್ಲಿ ಬಾಲ್ಯ ವಿವಾಹವು ಜರುಗುತ್ತಿದ್ದರೆ, ಅದನ್ನು ತಡೆಗಟ್ಟುವುದು ಕಂದಾಯ ಇಲಾಖೆಯ ಅಧಿಕಾರಿಗಳ ಆದ್ಯ ಕರ್ತವ್ಯವಾಗಿದೆ. ಸಾಮೂಹಿಕ ವಿವಾಹಗಳಲ್ಲಿ ಬಾಲ್ಯ ವಿವಾಹಗಳು ನಡೆಯದಂತೆ ಕಂದಾಯ ಅಧಿಕಾರಿಗಳು ಕೆಳಕಂಡ ಮುನ್ನೆಚ್ಚರಿಕೆ ಕ್ರಮಗಳನ್ನು ತಮ್ಮ ವ್ಯಾಪ್ತಿಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಮತ್ತು ಪೊಲೀಸ್ ಇಲಾಖೆಯ ಸಿಬ್ಬಂದಿಗಳ ಸಹಕಾರದಿಂದ ತೆಗೆದುಕೊಳ್ಳಬೇಕಾಗಿರುತ್ತದೆ.

1) ತಾಲ್ಲೂಕಿನಲ್ಲಿ ನಡೆಯುವ ಸಾಮೂಹಿಕ ವಿವಾಹ ಕಾರ್ಯಕ್ರಮಗಳಲ್ಲಿ ವಿವಾಹವಾಗುತ್ತಿರುವ ಜೋಡಿಗಳ ವಿವರವನ್ನು ಅಂದರೆ ಹೆಸರು, ತಂದೆಯ ಹೆಸರು, ವಯಸ್ಸು, ವಿಳಾಸವನ್ನು ಸಂಘಟನಕಾರರು ತಹಸೀಲ್ದಾರರಿಗೆ ಸಲ್ಲಿಸುವ ಬಗ್ಗೆ ಜಿಲ್ಲಾಡಳಿತವು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಮುಖಾಂತರ ವ್ಯಾಪಕ ಪ್ರಚಾರ ನಡೆಸಲು ಕ್ರಮ ಕೈಗೊಳ್ಳುವುದು.
2) ತಹಸೀಲ್ದಾರರು ಪಟ್ಟಿಯನ್ನು ಸಂಬಂಧಪಟ್ಟ ಗ್ರಾಮಲೆಕ್ಕಿಗರು, ರಾಜಸ್ವ ನಿರೀಕ್ಷಕರ ಮುಖಾಂತರ ವಿವರವಾಗಿ ಪರಿಶೀಲಿಸಿ ಮಕ್ಕಳ ಅಭಿವೃದ್ಧಿ ಯೋಜನಾಧಿಕಾರಿಯೊಂದಿಗೆ ದೃಢೀಕರಿಸಬೇಕು.
3) ಆದರ್ಶ ವಿವಾಹ ಯೋಜನೆಯ ಅನುದಾನ ನೀಡುವ ಮುನ್ನ ಬಾಲ್ಯ ವಿವಾಹವು ನಡೆದಿಲ್ಲವೆಂದು ಪರಿಶೀಲಿಸಿ ದೃಢೀಕರಿಸಬೇಕು.

ಮೇಲ್ಕಂಡ ಮಾರ್ಗಸೂಚಿಗಳನ್ನು ಜಿಲ್ಲಾಧಿಕಾರಿಗಳು ತಮ್ಮ ಜಿಲ್ಲೆಯಲ್ಲಿ ಕಟ್ಟುನಿಟ್ಟಾಗಿ ಪಾಲಿಸಲು ಈ ಮೂಲಕ ಕೋರಲಾಗಿದೆ.

(ಡಿ.ತಂಗರಾಜು)
ಪ್ರಧಾನ ಕಾರ್ಯದರ್ಶಿಗಳು
ಕಂದಾಯ ಇಲಾಖೆ.

ಇವರಿಗೆ:1)ಸರ್ಕಾರದ ಕಾರ್ಯದರ್ಶಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.
2)ಎಲ್ಲಾ ಪ್ರಾದೇಶಿಕ ಆಯುಕ್ತರುಗಳಿಗೆ
3)ಎಲ್ಲಾ ಜಿಲ್ಲಾಧಿಕಾರಿಗಳಿಗೆ
4) ಎಲ್ಲಾ ಉಪ ವಿಭಾಧಿಕಾರಿಗಳು/ ಎಲ್ಲಾ ತಹಸೀಲ್ದಾರರಿಗೆ.
5)ಹೆಚ್ಚುವರಿ ಪ್ರತಿಗಳು/ಶಾಖಾ ರಕ್ಷ ಕಡತಕ್ಕೆ.